ಶ್ರೀ ಸಿ. ಆರ್. ರಂಗೇಗೌಡ.—ಇದೇ ಪ್ರಶ್ನೆಯನ್ನು ಕಳೆದ ಸಾಲಿನಲ್ಲಿ ಕೇಳಿದಾಗ ಅಧಿಕಾರಿಗಳು ತಪ್ಪು ಉತ್ತರ ಕೊಟ್ಟಿದ್ದಾರೆ, ತಜ್ಞರನ್ನು ಕಳುಹಿಸಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ, ಇದುವರೆಗೂ ಮಾಡಿಲ್ಲ, ಈಗಲಾದರೂ ಮಾಡಬೇಕು. ಅಲ್ಲಿರತಕ್ಕವರೆಲ್ಲಾ ಮುಕ್ಕಾಲು ಭಾಗ ಹಿಂದುಳಿದವರೇ ಇದ್ದಾರೆ, ಅವರ ಅರ್ಜಿತ್ರಗಳನ್ನು ಮಣ್ಣುಪಾಲು ಮಾಡದೇ ಅವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಾ ಕೇಸುಗಳಲ್ಲೂ ನಾನೇ ಸ್ಥಳಕ್ಕೆ ಹೋಗಿ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಬೇಕೆಂದರೆ ಆಗುವುದಿಲ್ಲ, ರಿಪೋರ್ಟ್ ಕಾಲ್ ಫಾರ್ ಮಾಡುತ್ತೇವೆ, ಈ ಕೇಸ್‌ನಲ್ಲಿ ಹೇಳಿರುವ ಪ್ರಕಾರ ಅವರು ಸ್ವಲ್ಪ ಸ್ಥಳ ಬದಲಾವಣೆ ಮಾಡಿದ್ದಾರೆ. ಅದಕ್ಕೆ ಚೆಂಪೊರೆರಿ ಸಾಗುವಳಿ ಚೀಟ್ ಕೊಟ್ಟಿದ್ದಾರೆ, ಅದರಂತೆ ಅವರು ಸಾಗುವಳಿ ಮಾಡುತ್ತಾ ಇದ್ದಾರೆ, ಪರ್ಮನೆಂಟ್ ಆಗಿ ಸಾಗುವಳಿ ಚೀಟ್ ಕೊಡಬೇಕಾದರೆ ಆಕಾರ ಬಂದ್ ಆಗಬೇಕು, ಅದು ಆಗಬೇಕಾದರೆ ಸರ್ವೆ ಆಗಬೇಕು ಅದನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಗೊಪಾಲಗೌಡ.—ತಾವು ಹೇಳಿರುವ ಉತ್ತರದ ಪ್ರಕಾರ ಆಕಾರ ಬಂದ್ ಇದೆಲ್ಲಾ ಮಾಡಬೇಕು, ನಿಮ್ಮ ಸರ್ಕಾರದಲ್ಲಿ ಅದನ್ನು ಕಾರ್ಯಗತ ಮಾಡುವುದಕ್ಕೆ ಸಿಬ್ಬಂದಿ ಇದೆಯೇ ? ಅಥವಾ ಕಾರ್ಯಗತ ಮಾಡಬೇಕೆಂದು ತಾವು ಆದೇಶ ಕೊಟ್ಟಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ವೇ ಆಗದೇ ಪ್ರತಿಯೊಂದು ತಾಲ್ಲೂಕಿನಲ್ಲೂ 20-30 ವರ್ಷದ ಹಿಂದೆ ಜಮೀನು ವಂಜೂರು ಮಾಡಿದ್ದಾರೆ. ರೈತರು ಅದನ್ನು ಸಾಗುವಳಿ ಮಾಡುತ್ತಾ ಇದ್ದಾರೆ. ಅವಕ್ಕೆ ಪೋಡಿ ಕೆಲಸ ಆಗಿರುವುದಿಲ್ಲ. ಫೈನಲ್ ಆಗಿ ರೈತರಿಗೆ ಕನ್‌ಫರ್ಮ್ ಆಗಬೇಕಾದರೆ ಪೋಡಿ ಕೆಲಸ ಆಗಬೇಕು, ಆಕಾರ ಬಂದ್ ಆಗಬೇಕು, ಅದನ್ನು ಮಾಡಿಕೊಡುತ್ತಾರೆ.

Payment of Land Revenue Assessment.

*Q.—26. Sri C. S. HULKOTI (Mundargi).—

Will the Minister for Revenue be pleased to state :—

(*a*) whether a number of applicants in Dharwar District have applied under Section 83 (4) of the Mysore Land Revenue Act of 1964 for payment of land revenue assessment of five years in a lumpsum for the City Survey number bearing properties in the Municipal Area or outside and for passing orders of communication by accepting the lumpsum and exempting the properties from payment of land revenue assessment by annual instalment ;

(*b*) what steps have been taken to pass necessary orders thereon ;

(*c*) if no steps have been taken to pass necessary orders what are the reasons for the same ;

(*d*) since how long these applications are pending without passing orders ;

(*e*) whether there are any such applications pending in the Belgaum Division ?

A.—Sri M. V. KRISHNAPPA (Minister for Revenue).—

(*a*) Yes.

(*b*) The Deputy Commissioner, Dharwar, has passed orders in one case ; orders are being issued in two cases and the remaining cases are pending enquiry with the Tahsildars concerned.

(SRI M. V. KRISHNAPPA)

(*c*) Does not arise in view of reply to clause (*b*).
(*d*) From April 1965.
(*e*) Yes.

Sri C. S. HULKOTI.—May I know how many applications are pending ?

†Sri M. V. KRISHNAPPA.—About 25 applications are pending.

Sri C. S. HULKOTI.—May I know the nature of enquiry that has to be made in respect of each application ?

Sri M. V. KRISHNAPPA.—They have to get all the details when commutations are to be made. The R. R. records are to be got. No rules have been framed under that section till March. The rules have now been framed and a number of them have been disposed of.

Sri C. S. HULKOTI.—May I know when the enquiry will be completed ?

Sri M. V. KRISHNAPPA.—As early as possible.

ಶ್ರೀ ಬಿ. ಚನ್ನಬೈರೇಗೌಡ.—ಮುನಿಸಿಪಲ್ ನರಹದ್ದಿನಲ್ಲಿ ರೆವೆನ್ಯೂ ಸೈಟ್ ಇರುತ್ತದೆಯಲ್ಲಾ ಅದನ್ನು ಮುನಿಸಿಪಾಲಿಟಿಯವರಿಗೇ ವಹಿಸಿಕೊಡುವುದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಪ್ರಶ್ನೆಗೂ ತಮ್ಮ ಪ್ರಶ್ನೆಗೂ ಸಂಬಂಧವಿಲ್ಲ, ತಾವು ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

Acquisition of land for Industrial Purposes in Mangalore Taluk.

*Q.—33. Sri A. KRISHNA SHETTY (Mangalore-II).—

Will the Minister for Revenue be pleased to state :—

(*a*) the total extent of land (in acres) already acquired and proposed to be acquired for 'Industrial Purpose' in (i) Bangrakuppore (ii) Padukodi (iii) Kavoore (iv) Panjimogaru (v) Kunjathabail (vi) Marakada (vii) Derebail (viii) Bolorre (ix) Kadri B. Villages in Mangalore Taluk (Villagewise figures may be furnished) ;

(*b*) the total extent of land (in acres) already acquired and proposed to be aquired for purposes other than industry in those villages (Villagewise figures may be furnished) ;

(*c*) the number of families and persons (i) already displaced (ii) and going to be displaced as a result of acquisition under (*a*) and (*b*) ;

(*d*) the total extent of land (in acres) (i) under food crops (ii) gardens which are already affected and going to be affected as a result of acquisition under (*a*) and (*b*) ;

(*e*) whether Government have got any concrete proposals to rehabilitate the displaced persons as a result of acquisition under (*a*) and (*b*) above ?